vate firms will own and operate

UK-India FTA: Mysore silk, coffee, sandal soap may make their way to UK

EXPRESS NEWS SERVICE
Bengaluru

MYSORE Sandal Soap, Mysore Silk and Chikkamagaluru coffee could soon make their way to the United Kingdom, with discussions underway between the UK and Karnataka Industries officials as part of the India-UK Free Trade Agreement (FTA), Chandru Iyer, British Deputy High Commissioner for Karnataka and Kerala and Deputy Trade Commissioner for South Asia (Investment), said on Tuesday.

Iyer was speaking during a session on the FTA organised by the Bangalore Chamber of Industry and Commerce (BCIC). Harjinder Kang, Trade Commissioner for South Asia and British Deputy High Commissioner for Western India, was also present during the session.

Iyer said the UK wants to be part of "the new modern India story," which even PM Modi reflected on during his recent Bengaluru visit, which is why



File picture

several British companies have invested in the state. India has been the second-largest investor in the UK for six years, he said.

He pointed to homegrown Karnataka brands that have expanded to the UK, such as MTR and Hatti Kaapi, which recently opened its first outlet in London. "We know that the first consignment of jamun fruit from Karnataka has gone to the UK. From a horticulture perspective, there are a lot of opportunities," Iyer added.

He further noted that Karnataka has strong potential in sectors like gems and jewellery, textiles, and traditional crafts. "I would love to see Channapatna toys and Chikkamagaluru coffee being sold in the UK. These product lines have great potential, and it's now for someone to take them forward," he said. On UK-based tech investments in Bengaluru, Iyer said details remain confidential but "the pipeline is very strong" and would provide significant back-office and job creation impetus. The proposed India-UK Free Trade Agreement (FTA) could double bilateral trade by 2030, offering 99% duty-free access for Indian goods to the UK market and substantial tariff cuts on British products to India, the officials explained.

Kang highlighted that the agreement is expected to benefit key sectors on both sides. "Indian exports such as textiles, leather, footwear, marine products, and engineering goods would enter the UK market at zero duty, while India would reduce tariffs on 90% of British products, including whisky, gin, cosmetics, and automotive components," he said.

13-08-2025
Ind. Exp. Pg.07

ಹಸಿರು ಕೃಷಿ ಪ್ರವಾಸೋದ್ಯಮ ಕಾರ್ಯಕ್ರಮ
ಮಕ್ಕಳಿಗೆ ಕೃಷಿ ಕುರಿತು ಅರಿವು ಮೂಡಿಸಿ

• **ಬೆಂಗಳೂರು:** ಮಕ್ಕಳು ಕೃಷಿ ಮಹತ್ವವನ್ನು ಬಾಲ್ಯದಲ್ಲೇ ಅರಿಯಲು ಯಂಗ್ ಹಾರ್ವೆಸ್ಟರ್ ಕಾರ್ಯಕ್ರಮ ಸಹಕಾರಿಯಾಗಿದೆ ಎಂದು ಎನ್ ಇಎಫ್ ಕಾರ್ಯದರ್ಶಿ ವರ್ಷ್ಯ ಡಿಕೆಎಸ್ ಹೆಗ್ಡೆ ತಿಳಿಸಿದರು.

ಚಿಕ್ಕಮಗಳೂರಿನ ಹಸಿರು ಆರ್ಗ್ಯಾನಿಕ್ಸ್ ಸಂಸ್ಥೆಯು ಈಗಾಗಲೇ ಮೂರು ವರ್ಷದಿಂದ ಹಸಿರು ಕೃಷಿ ಪ್ರವಾಸೋದ್ಯಮ ಎಂಬ ಕಾರ್ಯಕ್ರಮವನ್ನು ರೈತರಿಗಾಗಿ ಆರಂಭಿಸಿ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ. ಈ ಸಂಸ್ಥೆಯ ಮುಂದಿನ ಯೋಜನೆಯಾಗಿ ಮಕ್ಕಳಿಗೆ ಯಂಗ್ ಹಾರ್ವೆಸ್ಟರ್ ಎಂಬ ಹೆಸರಿನಲ್ಲಿ ಮೊದಲ ಬಾರಿಗೆ ಜಿಕೆವಿಕೆ ಆವರಣದಲ್ಲಿ ಆಯೋಜಿಸಲಾಗಿದ್ದ, ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಮಕ್ಕಳು ಕೃಷಿ ಮಹತ್ವವನ್ನು ಬಾಲ್ಯದಲ್ಲಿಯೇ ಅರಿಯಲು ಈ ಕಾರ್ಯಕ್ರಮವು ಸಾಕ್ಷಿಯಾಗಿದೆಂದರು.

ಮಕ್ಕಳಿಗೆ ಆಹಾರದ ಮೂಲಗಳು, ಬೆಳೆ ಬೆಳೆಸುವ ವಿಧಾನಗಳು, ರೈತರ ಪರಿಶ್ರಮ, ಪ್ರಕೃತಿ, ಮಣ್ಣು, ನೀರು, ಹವಾಮಾನ ಪ್ರಮುಖ್ಯತೆ, ಪರಿಸರ ಸ್ನೇಹಿ ಬದುಕನ್ನು ಕಟ್ಟಿಕೊಳ್ಳುವ ಮನೋಭಾವವನ್ನು ಬೆಳೆಸಿಕೊಳ್ಳುವುದ ಇಂದಿನ ಅಗತ್ಯ ವಾಗಿದೆ ಎಂದು ತಿಳಿಹೇಳಿದರು.



ಕುಲಪತಿ ಡಾ.ಎಸ್.ವಿ.ಸುರೇಶ ಮಾತನಾಡಿ, ದೇಶದ ಆಹಾರ ಉತ್ಪಾದನೆ ನಿರಂತರವಾಗಿ ಮುಂದುವರೆಯಲು, ಮುಂದಿನ ಪೀಳಿಗೆಯ ಮಕ್ಕಳಿನಲ್ಲಿ ಕೃಷಿ ಕುರಿತು ಆಸಕ್ತಿ ಪೂರಕ ಮನೋಭಾವ ಬೆಳೆಸಬೇಕು. ಇಂದಿನ ಮಕ್ಕಳೆಲ್ಲರೂ ನಾಳೆಯ ಕೃಷಿಕರು, ವಿಜ್ಞಾನಿಗಳಾಗಿದ್ದು ದೇಶಕ್ಕೆ ನಿಮ್ಮಿಂದ ಕೊಡುಗೆಯನ್ನು ನೀಡಲು ಈ ಕಾರ್ಯಕ್ರಮ ಸಹಕಾರಿಯಾಗಲಿದೆ ಎಂದು ಆಶಿಸಿದರು. ಲಾರೆನ್ಸ್ ಶಾಲೆಯಿಂದ 5ನೇ ತರಗತಿಯ ಸುಮಾರು 170ಕ್ಕೂ ಹೆಚ್ಚು ಮಕ್ಕಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾಫಿ ಮಂಡಳಿ ಅಧ್ಯಕ್ಷ ಎಮ್.ಜಿ. ದಿನೇಶ್, ಜಿಕೆವಿಕೆ ಡೀನ್ ಡಾ.ಎನ್.ಬಿ. ಪ್ರಕಾಶ್, ಹಸಿರು ಆರ್ಗ್ಯಾನಿಕ್ಸ್ ಸಂಸ್ಥೆಯ ಅಧ್ಯಕ್ಷ ಅರವಿಂದ್.ಬಿ.ಸಿ ಸೇರಿದಂತೆ ಇತರರಿದ್ದರು.

13-08-2025
Hosa Digantha Pg.12

ಜೈವಿಕ ಇಂಧನ ದಿನಾಚರಣೆ ಎಸ್.ಈ.ಸುಧೀಂದ್ರ ಅಭಿಮತ | ಮುಂದಿನ 5 ವರ್ಷದಲ್ಲಿ ಲಕ್ಷ ಕೋಟಿ ಹೂಡಿಕೆ ನಿರೀಕ್ಷೆ

ಹೊಸ ಜೈವಿಕ ಇಂಧನ ನೀತಿಯಿಂದ ಸಮಗ್ರ ಅಭಿವೃದ್ಧಿ

• ಕನ್ನಡಪ್ರಭ ವಾರ್ತೆ ಬೆಂಗಳೂರು

ಕರ್ನಾಟಕ ರಾಜ್ಯದ ಉದ್ದೇಶಿತ ನೂತನ ಜೈವಿಕ ಇಂಧನ ನೀತಿಯು ಜೈವಿಕ ಇಂಧನ ಕ್ಷೇತ್ರದಲ್ಲಿ ಸಮಗ್ರ ಬದಲಾವಣೆ ಹಾಗೂ ರಾಜ್ಯದ ಅಭಿವೃದ್ಧಿಗೆ ಭದ್ರ ಬುನಾದಿ ಹಾಕುತ್ತದೆ ಎಂದು ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಸ್.ಈ. ಸುಧೀಂದ್ರ ಹೇಳಿದ್ದಾರೆ.

ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಅಭಿವೃದ್ಧಿ ಸಂಸ್ಥೆ ನಗರದಲ್ಲಿ ಆಯೋಜಿಸಿದ್ದ ವಿಶ್ವ ಜೈವಿಕ ಇಂಧನ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಜೈವಿಕ ಇಂಧನ ನೀತಿ ಅನುಷ್ಠಾನದಿಂದ ರಾಜ್ಯದಲ್ಲಿ ಮುಂದಿನ 5 ವರ್ಷಗಳಲ್ಲಿ 1 ಲಕ್ಷ ಕೋಟಿ ರು.ಗೂ ಹೆಚ್ಚಿನ ಬಂಡವಾಳ ಹರಿದು ಬರುವ ನಿರೀಕ್ಷೆ ಇದೆ. 3 ಲಕ್ಷಕ್ಕೂ ಹೆಚ್ಚು ನೇರ ಹಾಗೂ ಪರೋಕ್ಷ ಉದ್ಯೋಗ ಸೃಜನೆ, ರೈತರ ಕುಟುಂಬಗಳ ಆದಾಯದ ಹೆಚ್ಚಳದ ಜೊತೆಗೆ ಯುವ



ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಅಭಿವೃದ್ಧಿ ಸಂಸ್ಥೆ ನಗರದಲ್ಲಿ ಆಯೋಜಿಸಿದ್ದ ವಿಶ್ವ ಜೈವಿಕ ಇಂಧನ ದಿನಾಚರಣೆಯನ್ನು ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಸ್. ಈ. ಸುಧೀಂದ್ರ ಉದ್ಘಾಟಿಸಿದರು.

ಉದ್ದಿಮೆದಾರರಿಗೆ ಪ್ರೋತ್ಸಾಹ ದೊರೆಯಲಿದೆ ಎಂದರು.

ಮುಂದಿನ ಐದು ವರ್ಷಗಳು ರಾಜ್ಯದಲ್ಲಿ ಜೈವಿಕ ಇಂಧನ ಕ್ಷೇತ್ರದ ಅಭಿವೃದ್ಧಿಯಲ್ಲಿ ನಿರ್ಣಾಯಕವಾಗಲಿದೆ. ಭಾರತ ವಿಶ್ವದ 3ನೇ ಆರ್ಥಿಕತೆಯ ರಾಷ್ಟ್ರವಾಗಲು ತನ್ನದೇ ಆದ ಕೊಡುಗೆಯನ್ನು ನೀಡಲಿದೆ ಎಂದು ಸುಧೀಂದ್ರ ವ್ಯಾಖ್ಯಾನಿಸಿದರು.

ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕಿ ಡಾ. ಗಾಯತ್ರಿ ರೆಡ್ಡಿ ಮಂಡಳಿಯ ಕಾರ್ಯ ಸಮಿತಿಯ ಸದಸ್ಯ ಡಾ. ಬಾಲಕೃಷ್ಣ ಗೌಡ ಇನ್ನಿತರರು ಉಪಸ್ಥಿತರಿದ್ದರು.

13-08-2025
Kannada Prabha Pg.03

ಹದವಾದ ಮಳೆ । ಪೂರಕ ವಾತಾವರಣದಿಂದ ರೈತರಿಗೆ ಹಿಗ್ಗು

ಅಡಕೆ ಇಳುವರಿ ಹೆಚ್ಚಳ ನಿರೀಕ್ಷೆ

■ ಬಸವರಾಜ ಕೆ.ಜೆ. ದಾವಣಗೆರೆ
basava.darshu@gmail.com



ಕಳೆದ ವರ್ಷ ಅತಿಯಾದ ಮಳೆಯಿಂದಾಗಿ ಇಳುವರಿ ನಷ್ಟ ಅನುಭವಿಸಿದ್ದ ಅಡಕೆ ಬೆಳೆಗಾರರು, ಈ ಬಾರಿ ಹದವಾದ ಮಳೆ ಹಾಗೂ ಪೂರಕ ವಾತಾವರಣದ ಕಾರಣದಿಂದ ಹೆಚ್ಚು ಇಳುವರಿ ನಿರೀಕ್ಷೆಯಲ್ಲಿದ್ದಾರೆ. ಈ ಬಾರಿ ಶೇ.35ರಷ್ಟು ಹೆಚ್ಚುವರಿ ಇಳುವರಿ ಪಡೆಯುವ ಸಂತಸದಲ್ಲಿದ್ದಾರೆ.

ಅಡಕೆ ಬೆಳೆ ವ್ಯಾಪ್ತಿ	
ರಾಜ್ಯ	7,56,364 ಹೆಕ್ಟೇರ್
ಜಿಲ್ಲೆ	1,04,574 ಹೆಕ್ಟೇರ್

ಮಧ್ಯ ಕರ್ನಾಟಕದ ಅಡಕೆ ತೋಟಗಳಲ್ಲಿ 2023ರಲ್ಲಿ ಬರು ಬಿಸಿಲು ಹಾಗೂ 2024ರಲ್ಲಿ ಅಧಿಕ ಮಳೆಯಿಂದ ಹೆಚ್ಚು ಇಂಗಾರು ಬಡದೆ ಸೊರಗಿ ಹೋಗಿದ್ದವು. ಕಳೆದ ವರ್ಷ ಮಳೆ ಆರ್ಭಟಕ್ಕೆ ಸಾಕಷ್ಟು ತೋಟಗಳಲ್ಲಿ ಸುಳಿ ಹಾಗೂ ಇಂಗಾರು ಕೊಳೆ ರೋಗ ಕಾಣಿಸಿಕೊಂಡು ಸಾಕಷ್ಟು ಗಿಡಗಳು ಹಾನಿಗೀಡಾಗಿದ್ದವು. ಕಳೆದ ವರ್ಷ ಹರಳು ಉದುರುವ ಸಮಸ್ಯೆ ಹೆಚ್ಚಾಗಿತ್ತು. ಕಾರಣ, ರೈತರಿಗೆ ನಿರೀಕ್ಷಿತ ಇಳುವರಿ ದೊರೆತಿರಲಿಲ್ಲ. ಎರಡು ವರ್ಷ ಹಿಂದೆ ರಾಶಿ ಅಡಕೆ ದರ ಕುಸಿತದಿಂದ ರೈತರು ಕಂಗಾಲಾಗಿದ್ದರು. ತಜ್ಞರು ಹೇಳುವಂತೆ ಕಳೆದ ವರ್ಷ ರಾಜ್ಯಾದ್ಯಂತ ಅಡಕೆ ಇಳುವರಿ ಶೇ.40ರಷ್ಟು ಕುಸಿತ ಕಂಡಿತ್ತು. ಆದರೆ ಇದೇ ವೇಳೆ ಅಡಕೆಗೆ ಬಂಪರ್ ಬೆಲೆ ಬಂದಿದ್ದರಿಂದ ಇಳುವರಿ ಕುಸಿತದ ನಷ್ಟ ಬೆಳೆಗಾರರನ್ನು ಅಷ್ಟಾಗಿ ಕಾಡಲಿಲ್ಲ.

ರೈತರಿಗೆ ಬಂಪರ್ ವರ್ಷ: ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಇಳುವರಿಯಲ್ಲಿ ಶೇ.35ರಷ್ಟು ಹೆಚ್ಚಳವಾಗುವ ಸಾಧ್ಯತೆ ಇದೆ. ಪ್ರಸ್ತುತ ಜಿಲ್ಲೆಯಲ್ಲಿ 1,04,574 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅಡಕೆ ಬೆಳೆಯುತ್ತಿದ್ದು, ಈ ಪೈಕಿ ಶೇ.70ರಷ್ಟು ತೋಟಗಳು ಫಲಕ್ಕೆ ಬಂದಿವೆ. ಜಿಲ್ಲೆಯಲ್ಲಿ ನೀರಾವರಿ ಭೂಮಿಯ ತೋಟಗಳಲ್ಲಿ ಎಕರೆಗೆ 7ರಿಂದ 8 ಕ್ವಿಂಟಾಲ್ ಹಾಗೂ ಮಿಶ್ರ ಭೂಮಿಯಲ್ಲಿ ಎಕರೆಗೆ 10ರಿಂದ 11 ಕ್ವಿಂಟಾಲ್ ಇಳುವರಿ ಬರುತ್ತದೆ. ಈ ಬಾರಿ ಇಳುವರಿ ಉತ್ತಮ ಗೊಳ್ಳುವ ಸೂಚನೆಗಳಿರುವ ಕಾರಣ ಸರಾಸರಿ 10 ಕ್ವಿಂಟಾಲ್ ಇಳುವರಿ ಅಂದುಕೊಂಡರೂ, ಸುಮಾರು 8 ಲಕ್ಷ ಕ್ವಿಂಟಾಲ್ ರಾಶಿ ಅಡಕೆ ಉತ್ಪಾದನೆ ನಿರೀಕ್ಷಿಸಬಹುದು. ಇದರಿಂದಿಗೆ ಪ್ರಸ್ತುತ ಕ್ವಿಂಟಾಲ್ ಅಡಕೆ ಗರಿಷ್ಠ ದರ 59,000 ರೂ. ಇದ್ದು ಡಿಸೆಂಬರ್ ವೇಳೆಗೆ 65 ಸಾವಿರ ರೂ. ತಲುವುವ ಸಾಧ್ಯತೆ ಇದೆ.

ತೋಟ ಹಿಡಿಯಲು ಹಿಂದೇಟು

ಈ ನಡುವೆ ಬೇಡಿದಾರರು ಅಡಕೆ ತೋಟ ಬೇಡಿ ಹಿಡಿಯಲು ಹಿಂದೇಟು ಹಾಕುತ್ತಿದ್ದಾರೆ. ಒಂದು ಕ್ವಿಂಟಾಲ್ ಹಸಿ ಅಡಕೆಗೆ 13ರಿಂದ 13.5 ಕೆಜಿ ರಾಶಿ ಅಡಕೆ ಕೊಡುವಂತೆ ರೈತರು ಬೇಡಿಕೆ ಇಡುತ್ತಿದ್ದು, ಚೌಕಾಸಿಗೆ ಇಳಿಯುವ ಬೇಡಿದಾರರು 12.5 ಕೆಜಿಗಿಂತ ಹೆಚ್ಚು ಕೊಡುವುದಿಲ್ಲ ಎಂದು ಪಟ್ಟು ಹಿಡಿಯುತ್ತಿದ್ದಾರೆ. ಈಗಾಗಲೆ ಕೆಲವು ಭಾಗಗಳಲ್ಲಿ ಅಡಕೆ ಕೊಯ್ಲು ಆರಂಭವಾಗಿದ್ದು ಬೇಡಿದಾರರ ಹಟಕ್ಕೆ ರೈತರು ಸೋಲಬೇಕಾದ ಪರಿಸ್ಥಿತಿ ಬಂದೊದಗಿದೆ. ಬೆಲೆ ಏರಿಳಿತ ಹಾಗೂ ಕಾರ್ಮಿಕರ ಅಲಭ್ಯತೆಯಿಂದಾಗಿ ತಮಗೆ ನಷ್ಟವಾಗುತ್ತಿದೆ ಎಂಬುದು ಬೇಡಿದಾರರ ವಾದ.

ಕಳೆದ ವರ್ಷ ಅತಿ ಹೆಚ್ಚು ಮಳೆ ಆಗಿದ್ದಕ್ಕೆ ಕೊಳೆ ರೋಗ ಕಾಣಿಸಿಕೊಂಡಿತ್ತು. ಪರಿಣಾಮ, ಶೇ.40ರಷ್ಟು ಇಳುವರಿ ಕುಸಿದಿತ್ತು. ಈ ಬಾರಿ ಈ ಬಾರಿ ಕೂಡ ಉತ್ತಮ ಮಳೆಯಿದ್ದರೂ, ಎಲ್ಲ ಕಡೆ ಸಮನಾಗಿಲ್ಲ, ಸದ್ಯದ ಪರಿಸ್ಥಿತಿ ಆಧಾರದಲ್ಲಿ ಹೇಳುವುದಾದರೆ ಶೇ.5ರಿಂದ 10ರಷ್ಟು ಮಾತ್ರ ನಷ್ಟ ಆಗಬಹುದು.

-ಡಾ.ಎಂ.ಜೆ. ಬಸವನಗೌಡ
ತೋಟಗಾರಿಕೆ ವಿಜ್ಞಾನಿ, ತರಳಬಾಳು ಕವಿಕೆ.

13-08-2025
Vijaya Kar. Pg.07

ನಮ್ಮೊಳಗೆ ಮುಸುಕಿನ ಗುದ್ದಾಟ

● ಶ್ರೀಧರ ಎಸ್. / ಗುರುರಾಜ ಪುರೋಹಿತ

ಬಿಸಿಬಿಸಿ ಬೇಬಿ ಕಾರ್ನ್ ಮಂಚೂರಿ, ಬೇಬಿ ಚಿಲ್ಲಿ ಅಂದರೆ ಎಲ್ಲರಿಗೂ ಇಷ್ಟ. ಕೆಂಡದಲ್ಲಿ ಕಾಯಿಸಿದ ಮುಸುಕಿನ ಜೋಳದ ತೆನೆ, ಸ್ವೀಟ್ ಕಾರ್ನ್ ಸುವಾಸನೆ ಮೂಗಿಗೆ ಬಡಿದರೆ ಬಾಯಲ್ಲಿ ನೀರು ಬರುತ್ತದೆ. ಇಂಥ ಮುಸುಕಿನ ಜೋಳ ಅಥವಾ ಮೆಕ್ಕೆಜೋಳ ಅತಿಯಾದ ಯೂರಿಯಾ ಉಂಡು, ವಿವರೀತ ರಾಸಾಯನಿಕ ಸಿಂಪಡಣೆಯಿಂದ ಆರೋಗ್ಯಕ್ಕೆ ಸವಾಲು ಒಡ್ಡುತ್ತಿದೆ.



ಸ್ವೀಟ್ ಕಾರ್ನ್, ಬೇಬಿ ಕಾರ್ನ್ ಸೇರಿದಂತೆ ಎಲ್ಲ ಮಾದರಿಯ ಮುಸುಕಿನ ಜೋಳಕ್ಕೆ ಬಿಳಿ ಸುಳಿ ರೋಗ, ಕಾಡಿಗೆ ರೋಗ, ಎಲೆ ಅಂಗಮಾರಿ, ಕಾಂಡ ಕೊಳೆ, ಸ್ಪೈಡರ್ ಮಿಟ್ಸ್ ಇತ್ಯಾದಿ ರೋಗಗಳಿವೆ. ಎಲೆ ತಿನ್ನುವ ಕೀಟ ಬಾಧೆ ಸಾಮಾನ್ಯ. ಪೈರು ಉಳಿಸಿಕೊಳ್ಳಲು ಹೇಮೊ ಮಿಥೇನ್ ಬೆಂಜೋಯೇಟ್, ಮೆಟಲಾಕ್ಸಿಲ್ ಮತ್ತು ಮೆನ್‌ಕೋಸೆಡ್ ಇತ್ಯಾದಿ ಪೀಡನಾಶಕ ಸಿಂಪಡಿಸಲಾಗುತ್ತದೆ. ಸಿಂಪಡಿಸಿದ ಎರಡು ವಾರಗಳ ನಂತರವಷ್ಟೇ ಕಟಾವು ಮಾಡುವಂತೆ ವಿಜ್ಞಾನಿಗಳು ಸೂಚಿಸುತ್ತಾರೆ. ಆದರೆ, ಎಳೆಯದು, ತಾಜಾ ಇದ್ದರೆ ಮಾತ್ರ ತಿನ್ನಲು ಯೋಗ್ಯ. ಮಾರುಕಟ್ಟೆಯಲ್ಲೂ ಬೇಡಿಕೆ. ಹೀಗಾಗಿ ಎರಡು ವಾರಗಳ ಸುರಕ್ಷಿತ ಅವಧಿ ಪಾಲನೆ ವಿಚಾರ ಮರೆತು ಕಟಾವು ಮಾಡಿ, ಮಾರುಕಟ್ಟೆಗೆ ಕಳುಹಿಸುವಂಥ ತಪ್ಪು ಕ್ರಮಗಳು ಆರೋಗ್ಯಕ್ಕೆ ಹಾನಿ ಮಾಡಬಲ್ಲವು.



ಗೊಬ್ಬರ 3 ಪಟ್ಟು ಅಧಿಕ

ಮುಸುಕಿನ ಜೋಳ

"ಮುಸುಕಿನ ಜೋಳ ಬೆಳೆಯಲು ಯೂರಿಯಾ ಗೊಬ್ಬರವನ್ನು ಶಿಫಾರಸು ಮಾಡಿದ್ದಕ್ಕಿಂತ 3 ಪಟ್ಟು ಹೆಚ್ಚು ಹಾಕಲಾಗುತ್ತದೆ. ಹೆಚ್ಚು ಯೂರಿಯಾ ಬಳಸಿದರೆ ಬೆಳೆಯಲ್ಲಿ ನೈಟ್ರೇಟ್ ಹೆಚ್ಚಾಗಿ ಅವು ನೈಟ್ರೋಸಾಮೈನ್‌ಗಳಾಗಿ ಪರಿವರ್ತನೆಯಾಗುತ್ತದೆ. ಇಂಥ ಉತ್ಪನ್ನ ಸೇವನೆ ಕ್ಯಾನ್ಸರ್‌ಗೆ ಕಾರಣವಾಗಬಹುದು. ಮಕ್ಕಳಲ್ಲಿ ಬ್ಲೂಬೇಬಿ ಸಿಂಡ್ರೋಮ್ ಕಾಣಿಸಿಕೊಳ್ಳಬಹುದು," ಎನ್ನುತ್ತಾರೆ, ಜಂಟಿ ಕೃಷಿ ನಿರ್ದೇಶಕ ಕೆ. ಮಲ್ಲಿಕಾರ್ಜುನ. ಅಲ್ಲದೆ, ಶ್ವಾಸಕೋಶದ ಸಮಸ್ಯೆ, ಕೂದಲು ಉದುರುವುದು ಇನ್ನಿತರ ಆರೋಗ್ಯ ಸಮಸ್ಯೆ ಎದುರಾಗಬಹುದು.

ಬೇಬಿಕಾರ್ನ್‌ಲ್ಲಿ ಏನಿದೆ?

ಬೇಬಿಕಾರ್ನ್‌ನಲ್ಲಿ ಅಧಿಕ ಪ್ರಮಾಣದಲ್ಲಿ ನಾರಿನ ಅಂಶ, ವಿಟಮಿನ್ ಸಿ, ಅಲ್ಪ ಪ್ರಮಾಣದಲ್ಲಿ ಪ್ರೊಟೀನ್ ಇರುತ್ತದೆ. ಇದು ಜೀರ್ಣ ಕ್ರಿಯೆಗೆ ಸಹಕಾರಿ. ರಕ್ತದ ಕೊಲೆಸ್ಟೆರಾಲ್ ಅಂಶ ನಿಯಂತ್ರಿಸುತ್ತದೆ. ರೋಗ ನಿರೋಧಕ ಶಕ್ತಿ ವೃದ್ಧಿಸುತ್ತದೆ. ಕಣ್ಣಿನ ಆರೋಗ್ಯಕ್ಕೆ ಪೂರಕ. ಬೇಬಿಕಾರ್ನ್ ಸೇವನೆಗೂ ಮುನ್ನ ಉಗುರು ಬೆಚ್ಚಗಿನ ನೀರಿಗೆ ಉಪ್ಪು ಹಾಕಿ, 30 ನಿಮಿಷ ನೆನೆಸಿಟ್ಟು ಸೇವಿಸುವುದು ಉತ್ತಮ.



ರಾಸಾಯನಿಕ ಸಿಂಪಡಣೆ ಬದಲು ಬೇವಿನ ಎಣ್ಣೆ, ಗೋಮೂತ್ರ ಸಿಂಪಡಣೆ ಮಾಡಿ ಮುಸುಕಿನ ಜೋಳಕ್ಕೆ ಬರುವ ಕೀಟ ನಿಯಂತ್ರಣ ಮಾಡಬಹುದು. ಹೆಚ್ಚಿನ ರಾಸಾಯನಿಕ ಸಿಂಪಡಣೆ ಮನುಷ್ಯನ ಆರೋಗ್ಯಕ್ಕೇ ಮಾರಕ.

- ಡಾ. ರಾಜೇಂದ್ರ ಪ್ರಸಾದ್
ಕೀಟಶಾಸ್ತ್ರ ವಿಜ್ಞಾನಿ, ಕವಿಕೆ ಬೆಂಗಳೂರು ದಕ್ಷಿಣ

13-08-2025
Vijaya Kar. Pg.08

ಕೇಂದ್ರ ಸರಕಾರ ವಿವಿಧ ಬೆಳೆಗಳನ್ನು ಫಸಲ್ ಬಿಮಾ ವ್ಯಾಪ್ತಿಗೆ ಸೇರಿಸಿದ್ದರಿಂದ ಕೀಟಬಾಧೆ, ಪ್ರಕೃತಿ ವಿಕೋಪದಿಂದ ಬೆಳೆ ಹಾನಿಯಾದರೆ ವಿಮೆ ಪರಿಹಾರ ದೊರೆಯಲಿದೆ. ಆದರೆ ಕಬ್ಬು ಬೆಳೆಯನ್ನು ಈ ಯೋಜನೆಗೆ ಸೇರಿಸದೆ ಕೈಬಿಟ್ಟಿರುವುದು ಬೇಸರದ ಸಂಗತಿ. ಈ ಸಮಸ್ಯೆಗೆ ಶೀಘ್ರ ಪರಿಹಾರ ದೊರೆಯಬೇಕು.

ಡಿ.ಎಂ. ಸಾಮಕಾರ



ಕಬ್ಬು ಬೆಳೆಗೂ ಬೇಕು ಬೆಳೆ ವಿಮೆ ರಕ್ಷೆ

ಕೃಷಿಯಿಂದ ಬದುಕು ದಿನದಿಂದ ದಿನಕ್ಕೆ ಮಾಬಾರಿಯಾಗುತ್ತಿದ್ದು, ಒಂದು ಕಡೆ ಮಳೆ ಕೈ ಕೊಟ್ಟರೆ, ಮತ್ತೊಂದೆಡೆ ಕೂಲಿ ಕಾರ್ಮಿಕರ ಕೊರತೆ. ಇನ್ನೊಂದೆಡೆ ಪ್ರಕೃತಿ ವಿಕೋಪದಿಂದಾಗುವ ಹಾನಿ. ಬೆಳೆ ಉತ್ಪನ್ನಗಳಿಗೆ ಉತ್ತಮ ದರ ಸಿಗದೇ ಸಂಕಷ್ಟದ ಪರಿಸ್ಥಿತಿ. ಕೆಲವು ಬೆಳೆಗಳಿಗೆ ಬೆಳೆ ವಿಮೆ ಸೌಲಭ್ಯ ಇರುವುದರಿಂದ ಹಾನಿಗೊಳಗಾದರೆ ವಿಮೆ ಪರಿಹಾರ ದೊರೆಯುತ್ತದೆ. ಆದರೆ ಕಬ್ಬು ಬೆಳೆಯನ್ನು ಬೆಳೆ ವಿಮೆ ಯೋಜನೆಯಿಂದ ಹೊರಗಿಟ್ಟಿರುವುದು ಸಮಂಜಸವಲ್ಲ ಎಂದು ರೈತರು ಕಿಡಿಕಾರುತ್ತಿದ್ದಾರೆ.

ಸಕ್ಕರೆ ಕಾರ್ಖಾನೆಗಳು ಕಬ್ಬು ಅರೆಯುತ್ತಿರುವ ಸಂದರ್ಭದಲ್ಲಿ ಆಕಸ್ಮಿಕವಾಗಿ ಕಬ್ಬು ಬೆಳೆ ಸುಟ್ಟರೆ ಕಾರ್ಖಾನೆಯವರೇ ಕಟಾವು ಮಾಡಿ ತೆಗೆದುಕೊಂಡು ಹೋಗಿ, ತೂಕದಲ್ಲಿ ಶೇ. 25ರಷ್ಟು ಕಡಿತ ಮಾಡಿ ಹಣ ಪಾವತಿ ಮಾಡುವದರಿಂದ ರೈತನಿಗೆ ಅಲ್ಪ ಪ್ರಮಾಣದ ಹಾನಿಯಾಗುತ್ತದೆ. ಆದರೆ ಗುಜರಾತ ರಾಜ್ಯದಲ್ಲಿ ಸುಟ್ಟ ಕಬ್ಬಿಗೆ ಕಡಿತ ಮಾಡದೇ ನಿಗದಿತ ದರ ಪಾವತಿ ಮಾಡುತ್ತಾರೆ. ಸಕ್ಕರೆ ಕಾರ್ಖಾನೆಗಳು ಬಂದ್ ಇರುವ ಸಂದರ್ಭದಲ್ಲಿ ಕಬ್ಬು ಬೆಳೆ ಬೆಂಕಿಗೆ ಆಹುತಿಯಾದರೆ ರೈತನಿಗಾಗುವ ಹಾನಿ ಅಷ್ಟಿಷ್ಟಲ್ಲ. ಕೃಷಿಕರೇ ಕಬ್ಬು ಕಟಾವಿಗೆ ಹಣ ಕೊಡಬೇಕು. ಬೇರೆಡೆ ಸಾಗಿಸುವ ವೆಚ್ಚವನ್ನು ರೈತರೇ ಭರಿಸಬೇಕು. ಇದರಿಂದ ಭಾರಿ ಪ್ರಮಾಣದ ಹಾನಿಯಾಗುತ್ತದೆ. ಇದಕ್ಕೆ ಸರ್ಕಾರ ಪರಿಹಾರ ನೀಡುವ ವ್ಯವಸ್ಥೆ ಜಾರಿಗೆ ತರಬೇಕಿದೆ.

ಸಂಕಷ್ಟದ ಸರಮಾಲೆ

ಹತ್ತಾರು ತಿಂಗಳು ಸಾಲಸೋಲ ಮಾಡಿ ಹಗಲು ರಾತ್ರಿ ಎನ್ನದೆ ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಬೆಳೆಸಿದ ಕಬ್ಬು ಬೆಂಕಿಗೆ ಆಹುತಿಯಾದರೆ ಆಗುವ ನಷ್ಟದ ಜೊತೆಗೆ ಮುಂದಿನ ಹಂಗಾಮಿನವರೆಗೆ ಬೆಳೆಸಿದಾಗ ಕುಳಿ ಬೆಳೆ ಕಟಾವಿಗೆ ಬರುವುದರಿಂದ ರೈತನ ಪರಿಸ್ಥಿತಿಯನ್ನು ಶಬ್ದಗಳಲ್ಲಿ ವರ್ಣಿಸಲು ಅಸಾಧ್ಯ. ಇನ್ನೊಂದೆಡೆ ಮಳೆ ಕಡಿಮೆಯಾದರೆ ಗೊಬ್ಬೆಹುಳು ಬಾಧೆಯಿಂದ ಕಬ್ಬು ಒಣಗಿ ಹೋಗುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಬ್ಬಿಗೆ ಬೆಳೆ ವಿಮೆ ಜಾರಿಗೊಳಿಸುವುದು ಅತ್ಯಗತ್ಯವಾಗಿದೆ. ಕನಿಷ್ಠ ಪಕ್ಷ ಕಾರ್ಖಾನೆಗಳು ಬಂದ್ ಇದ್ದಾಗ ಕಬ್ಬು ಸುಟ್ಟಾಗಲಾದರೂ ವಿಮೆ ಪರಿಹಾರ ನೀಡುವಂತೆ ಸರ್ಕಾರಗಳು ಕ್ರಮ ವಹಿಸಬೇಕಿದೆ.

ಬೇಸರದ ಸಂಗತಿ

ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲೂಕಿನಲ್ಲಿ ಕಳೆದೊಂದು ವಾರದಲ್ಲಿ ಅರಕೇರಿ, ಸಾನಗ, ಚಿಕ್ಕತಂಬಿಹಾಳ ಗ್ರಾಮದ ಕಬ್ಬಿನ ಪಡಗಳು ಬೆಂಕಿಗೆ ಆಹುತಿಯಾಗಿ ರೈತರು ನಷ್ಟ ಅನುಭವಿಸಿದ್ದು, ವಿದ್ಯುತ್ ಶಾರ್ಟ್ ಸರ್ಕ್ಯೂಟ್, ಬೈನ್ ಫಾಲ್ಸ್‌ನಿಂದಾದ ಹಾನಿಗೆ ಹೆಸ್ಕಾಂನಿಂದ ತಕ್ಕಮಟ್ಟಿಗೆ ಪರಿಹಾರ ದೊರೆಯಬಹುದು. ಸಂಪೂರ್ಣ ಹಾನಿ ಭರಿಸಲು ಸಾಧ್ಯವಿಲ್ಲ. ಮಂಡಿನ್ಯಾಗೊಳಸಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ, ಕರ್ನಾಟಕ ರೈತ ಸಿರಕ್ಷಾ ಪ್ರಧಾನ ಮಂತ್ರಿ ಫಸಲ್ ಭಮಾ ಯೋಜನೆ ವ್ಯಾಪ್ತಿಗೆ ಸಚ್ಚೆ. ಗೋವಿನಜೋಳ, ಹೆಸರು,ಈರುಳ್ಳಿ, ದಾಳಿಂಬೆ, ದ್ರಾಕ್ಷಿ ಸೇರಿದಂತೆ ಒಟ್ಟು 41 ಬೆಳೆಗಳು ವಿಮೆ ವ್ಯಾಪ್ತಿಗೆ ಸೇರಿವೆ. ಆದರೆ ಕಬ್ಬು ಬೆಳೆಯನ್ನು ವಿಮೆ ಯೋಜನೆಗೆ ಸೇರಿಸಿಲ್ಲ. ಕೇಂದ್ರ ಸರಕಾರ ವಿವಿಧ ಬೆಳೆಗಳನ್ನು ಫಸಲ್ ಬಮಾ ವ್ಯಾಪ್ತಿಗೆ ಸೇರಿಸಿದ್ದರಿಂದ ಕೀಟಬಾಧೆ, ಪ್ರಕೃತಿ ವಿಕೋಪದಿಂದ ಬೆಳೆ ಹಾನಿಯಾದರೆ ವಿಮೆ ಪರಿಹಾರ ದೊರೆಯಲಿದೆ. ಆದರೆ ಕಬ್ಬು ಬೆಳೆಯನ್ನು ಈ ಯೋಜನೆಗೆ ಸೇರಿಸದೆ ಕೈಬಿಟ್ಟಿರುವುದು ಬೇಸರದ ಸಂಗತಿ.

> 1ನೇ ಏಪ್ರಿಲ್ 2025ರಿಂದ ಬೀಳಗಿ 37, ಬಾಗಲಕೋಟೆ 32, ಬಾದಾಮಿ 28, ಮುಧೋಳ 24, ಹುನಗುಂದ-ಇಲಕಲ್ 16, ರಬಕವಿ-ಬನಹಟ್ಟಿ 15, ಜಮಖಂಡಿ 11 ಸೇರಿದಂತೆ ಒಟ್ಟು 163 ಕಡೆಗೆ ವಿವಿಧ ಕಾರಣಗಳಿಂದ ಕಬ್ಬಿಗೆ ಬೆಂಕಿ ತಗುಲಿದ ಕುರಿತು ಕರೆ ಬಂದಿದ್ದು, 2.92 ಕೋಟಿ ರೂ. ಕಬ್ಬು ಬೆಂಕಿಗೆ ಆಹುತಿಯಾಗಿದ್ದರೆ, 7.69 ಕೋಟಿ ರೂ. ಮೌಲ್ಯದ ಕಬ್ಬು ರಕ್ಷಣೆ ಮಾಡಲಾಗಿದೆ.
>
> ಪ್ರಕಾಶ ಪವಾರ
> ಜಂಟಿ ಅಗ್ನಿಶಾಮಕ ಅಧಿಕಾರಿ ಬಾಗಲಕೋಟೆ

> ವರ್ಷವಿಡಿ ಶ್ರಮವಹಿಸಿ ಬೆಳೆಸಿದ ಕಬ್ಬು ಸಕ್ಕರೆ ಕಾರ್ಖಾನೆಗಳು ಬಂದ್ ಇರುವ ಸಮಯದಲ್ಲಿ ಆಕಸ್ಮಿಕವಾಗಿ ಸುಟ್ಟರೆ ರೈತನಿಗೆ ಆಕಾಶವೇ ಕಳಚಿ ಮೈಮೇಲೆ ಬಿದ್ದಂತಾಗುತ್ತದೆ. ಕಬ್ಬು ಬೆಳೆಸಿದ ವಿರ್ಚು ಮತ್ತು ಸುಟ್ಟ ಕಬ್ಬು ಕಡಿದು ಆಚೆ ಹಾಕಲು ಮಾಡುವ ವಿರ್ಚು ರೈತನನ್ನು ಮತ್ತಷ್ಟು ಸಾಲದ ಕೂಪಕ್ಕೆ ತಳ್ಳುತ್ತದೆ. ಹೀಗಾಗಿ ಬೆಳೆ ವಿಮೆ ಮಾಡಿದರೆ ತಕ್ಕಮಟ್ಟಿಗೆ ನೆರವಾಗಬಹುದು.
>
> ಡಿವೈ ಹಾನಿಗೊಳಗಾದ ಕಬ್ಬು ಬೆಳೆಗಾರ, ಸುಟಗ

> ಕಬ್ಬು ಬೆಳೆಗೆ ಬೆಳೆ ವಿಮೆ ಸೌಲಭ್ಯ ಕಲ್ಪಿಸುವ ಮೂಲಕ ಕಬ್ಬು ಬೆಳೆ ಆಕಸ್ಮಿಕ ಬೆಂಕಿಗೆ ಆಹುತಿಯಾದರೆ, ಪ್ರಕೃತಿ ವಿಕೋಪದಿಂದಾದ ಹಾನಿಗೆ ವಿಮೆ ಪರಿಹಾರ ನೀಡಬೇಕು. ಸುಟ್ಟ ಕಬ್ಬಿಗೆ ಕಾರ್ಖಾನೆಯವರು ತೂಕ ಕಡಿತ ಮಾಡದೇ ಗುಜರಾತ ಮಾದರಿಯಲ್ಲಿ ಹಣ ಪಾವತಿಸಬೇಕು.
>
> ಸುಭಾಸ ಶಿರಹಾರ
> ರೈತ ಹೋರಾಟಗಾರ ಮುಧೋಳ

13-08-2025
Samyuktha Kar. Pg.10

July inflation eases to 8-yr low of 1.55%

Falls below RBI's lower tolerance band for first time in 6 yrs

GYANENDRA KESHRI
NEW DELHI, DHNS



- July inflation print is second-lowest since current series of the CPI was introduced in Jan 2015
- Lowest retail inflation under current CPI series was recorded in June 2017 when it stood at 1.46%

Retail inflation eased to an eight-year low of 1.55% in July, falling below the Reserve Bank of India's lower tolerance band, driven by broad-based decline in food prices, according to official data released on Tuesday.

The July inflation print is the second-lowest since the current series of the Consumer Price Index (CPI) was introduced in January 2015. The lowest retail inflation under the current CPI series was recorded in June 2017 when it stood at 1.46%.

The headline inflation has slipped below the RBI's tolerance band of 2 to 6% for the first time in over six years.

Food prices declined on a year-on-year basis while core inflation also eased.

Food inflation, which makes up nearly half of the CPI basket, stood at -1.76% in July, the lowest since January 2019.

The significant decline in headline inflation and food inflation during July is mainly attributed to favourable base effect and to the decline in inflation of pulses, transport and communication, vegetables, cereal, education, egg, sugar and confectionery, the Ministry of Statistics & Programme Implementation said.

Core inflation declined below 4% for the first time in six months. Excluding gold prices, the core inflation decelerated to 2.96% in July, almost 100 basis points lower than the headline core CPI. "While the fall in inflation over the past few months has benefited all segments, the lowest ones have gained the most as food prices fell year-on-year," said Dipti Deshpande, Principal Economist, Crisil.

▸ Inflation, Page 5

13-08-2025
Deccan Herald. Pg.01

Inflation eases to 8-year low of 1.55% in July

Inflation, From Page 1

"Our calculations show that in the rural areas, the lowest income segments saw the inflation rate plunge to 0.8% from 4.0% a year ago, whereas in the urban areas it slid to 1.0% from 2.7%," Deshpande added.

Analysts expect that the inflation will remain low in the coming months. "The inflation trends are expected to remain benign in the coming months as well amid soft food inflation. Positively, the core inflation softened marginally in July," said Upasna Bhardwaj, Chief Economist, Kotak Mahindra Bank.

"Despite comfortable inflation in the near term, we do not see much room for monetary easing as the medium term inflation trajectory is skewed above 4%," Bhardwaj said.

13-08-2025
Deccan Herald. Pg.05